ಊರಿನವರೇ ಹೇಳುವಂತೆ ಒಂದು ಸಲ ಆ ಊರಿಗೆ ವಿಪರೀತ ಬರ ಬಂದುದಲ್ಲದೆ ವಿಚಿತ್ರ ರೋಗ ಬಂದು ಜನಗಳು ಕಿವಿಯಲ್ಲಿ ರಕ್ತ ಸೋರಿ ಸಾಯುತ್ತಿದ್ದರಂತೆ. ಜನರಿಗೆ ಬಡಿಯುತ್ತಿದ್ದ ಈ ರೋಗವನ್ನು ವಾಸಿ ಮಾಡುವ ಸಲುವಾಗಿ ಶಿವ, ಆ ಊರ ಪಕ್ಕದ ಗುಡ್ಡದ ನೆತ್ತಿಯ ಮೇಲೆ ಇರುವ ಬೃಹತ್ತು ಶಿಲೆಯನ್ನು ತನ್ನ ತ್ರಿಶೂಲದಲ್ಲಿ ಒಂದು ಗೀಟನ್ನು ಕೊರೆದು ಅಲ್ಲಿ ನೀರು ಚಿಮ್ಮಿಸಿದನಂತೆ. ಪರಿಣಾಮ ಆ ಊರಿಗೆ ಬಡಿದಿದ್ದ ಬರ ಸರ್ವನಾಶವಾಗಿ ವಿಚಿತ್ರರೋಗದಿಂದ ಬಳಲುತ್ತಿದ್ದವರು ಆ ತ್ರಿಶೂಲ ಚಿಲುಮೆಯ ನೀರು ಕುಡಿದುದರಿಂದ ಕಿವಿಯಲ್ಲಿ ರಕ್ತ ಸೋರಿ ಸಾಯುವುದು ನಿಂತು ಹೋಯಿತಂತೆ. ಅಂದಿನಿಂದ ತ್ರಿಶೂಲ ಚಿಲುಮೆಯಲ್ಲಿ ಉಕ್ಕಿ ಹರಿಯುತ್ತಿದ್ದ ನೀರು ಎಂದಿಗೂ ನಿಂತಿರಲಿಲ್ಲವಂತೆ ಹಾಗೂ ಖಾಲಿಯಾಗಿದ್ದನ್ನು ಯಾರೂ ಕಂಡೇ ಇರಲಿಲ್ಲವಂತೆ. ಆ ಗುಡ್ಡದ ಮೇಲಿನ ಸಹಸ್ರ ಲಿಂಗೇಶ್ವರ ಗುಡಿಯಲ್ಲಿ ಶಿವ ಹಚ್ಚಿಟ್ಟು ಹೋಗಿರುವ ದೀಪ ಮೊನ್ನೆಮೊನ್ನೆಯ ತನಕ ಉರಿಯುತ್ತಲೇ ಇತ್ತು. ಎಷ್ಟೋ ಜನ ವಿಚಾರವಂತರು, ಸಾಹಿತಿಗಳು, ವಿಜ್ಞಾನಿಗಳು ಬಂದು ಕಲ್ಲೊಳಗೆ ಒರೆಯುವ ನೀರು ನೋಡಿ ವಿಸ್ಮಿತರಾಗಿ ಅದರ ಮೂಲ ಹುಡುಕಲು ಹೋಗಿ ಸೋತು ವಾಪಸ್ಸು ಹೋಗಿದ್ದಾರೆ. ಶಿವನು ತಮಗೆ ಮಾಡಿದ ಉಪಕಾರ ಮರೆಯಲಾರದೆ ಅವನ ಋಣ ತೀರಿಸಲು ಆ ಊರಿನವರು ತಮ್ಮ ಹೆಸರುಗಳ ಮುಂದೋ ಅಥವಾ ಹಿಂದೋ ಶಿವನ ಹೆಸರನ್ನು ಇಟ್ಟುಕೊಳ್ಳುವುದು ವಾಡಿಕೆಯಾಗಿದೆ. ಬೇರೆ ಊರುಗಳಿಂದ ಮದುವೆ ಆಗಿ ಬರುವ ಸೊಸೆಯಂದಿರುಗಳಿಗೆ ಅವರ ಹುಟ್ಟು ಹೆಸರನ್ನು ಬದಲಿಸಿ ತಮ್ಮ ಊರಿನ ಸಂಪ್ರದಾಯದ ಪ್ರಕಾರ ಹೆಸರಿಡಲಾಗುತ್ತದೆ. ಹಾಗಾಗಿ ಆ ಊರಿನಲ್ಲಿ ಶಿವಣ್ಣ, ಶಿವು, ಶಿವುಕುಮಾರ, ಶಿವರಾಜ್ ಕುಮಾರ, ಪುಟ್ಟ ಶಿವಯ್ಯ, ದೊಡ್ಡ ಶಿವಯ್ಯ, ಸಣ್ಣ ಶಿವಯ್ಯ, ಶಿವಶಂಕರ, ಶಿವಮ್ಮ, ದೊಡ್ಡ ಶಿವಮ್ಮ, ಚಿಕ್ಕ ಶಿವಮ್ಮ, ಮೂಲೆಮನೆ ಶಂಕರಣ್ಣ, ಹೊಸಮನೆ ಶಿವಣ್ಣ, ನಾಯಕರ ಈಶಣ್ಣ, ಶಂಕರಮ್ಮ, ಶಂಕರಲಿಂಗೇ ಗೌಡ್ರು, ರುದ್ರಮ್ಮ, ರುದ್ರಣ್ಣ, ರುದ್ರಸ್ವಾಮಿ, ಶಿವಣ್ಣ ಗೌಡ್ರು ಇತ್ಯಾದಿ...

ಆ ಊರಿನಲ್ಲಿನ ಆ ಶಿವನ ಕಲ್ಲುಗುಡ್ಡಕ್ಕೆ ಹೊಂದಿಕೊಂಡಂತೆ ಇರುವ ಸಣ್ಣ ಶಿವನಂಜಯ್ಯನ ಹೊಲದಲ್ಲಿ ಒಂದು ಬಂಗಾರದ ಜಿಂಕೆಯ ವಿಗ್ರಹ ಸಿಕ್ಕ ನಂತರ ಆ ಪುರಾಣ ಪ್ರಸಿದ್ಧ ಊರು ಜಗತ್ತಿನ ಸುದ್ದಿಯ ಕೇಂದ್ರ ಬಿಂದುವಾಯ್ತು. ಸಣ್ಣ ಶಿವನಂಜಯ್ಯನ ಆ ಎರಡು ಎಕರೆ ಹೊಲದಲ್ಲಿ ಮುನ್ನೂರು ಮುನ್ನೂರೈವತ್ತು ವರ್ಷದ ಹಳೇ ಆಲದ ಮರವನ್ನು ಕಡಿಯುವಾಗ ಅದು ಸಿಕ್ಕಿತ್ತು. ಏನಿಲ್ಲ ಅಂದರೂ ಐವತ್ತರಿಂದ ಐವತ್ತೈದು ಕೆ.ಜಿ ಇತ್ತು ಎಂದು ಮೊದಮೊದಲು ಹೇಳುತ್ತಿದ್ದರು. ಅದು ಸಿಕ್ಕ ಒಂದೇ ಗಂಟೆಯಲ್ಲಿಯೇ ಇಡೀ ಊರಿಗೆ ಹಬ್ಬಿ ಅದು ಸೀದಾ ಅಬ್ಬಿನಹೊಳೆ ಪೊಲೀಸ್ ಠಾಣೆಗೂ ತಲುಪಿತು. ಪೊಲೀಸಿನವರು ವ್ಯಾನ್‌ನಲ್ಲಿ ಬಂದು ಅದನ್ನು ಠಾಣೆಗೆ ಎತ್ತಿಕೊಂಡು ಹೋದರು. ಅದನ್ನು ತೆಗೆದುಕೊಂಡು ಹೋದ ಕೆಲವು ಗಂಟೆಗಳ ಬಳಿಕ ಸಣ್ಣ ಶಿವನಂಜಯ್ಯನನ್ನೂ ಠಾಣೆಗೆ ಕರೆದುಕೊಂಡು ಹೋದರು. 'ಏನ್ರೀ ನಿಮ್ಮ ಹೊಲದಲ್ಲಿ ನಿಧಿ ಸಿಕ್ಕ ವಿಷಯ ಸ್ಟೇಷನ್‌ಗೆ ಯಾಕೆ ತಿಳಿಸಲಿಲ್ಲ? ನೀವೇ ಖುದ್ದಾಗಿ ಬಂದು ತಿಳಿಸಬೇಕು' ಎಂದು ಬೆದರಿಸುವ ಧ್ವನಿಯಲ್ಲಿ ಕೇಳಿದರು. ಇನ್‌ಸ್ಪೆಕ್ಟರ್ ವಿಚಾರಣೆ ಮುಂದುವರಿಸಿ, 'ಈ ದೇಶದಲ್ಲಿರೋ ಯಾರ ಹೊಲಗಳೂ ಅವರವಲ್ಲ. ಹೆಸರಿಗಷ್ಟೇ ಅವರವು. ಅಲ್ಲಿ ಬೆಳೆ ಬೆಳೆಯಬಹುದು ಅಷ್ಟೇ. ಆದರೆ, ಅಲ್ಲೇನಾದರೂ ನಿಧಿಗಿಧಿ ಸಿಕ್ಕರೆ ಸರ್ಕಾರಕ್ಕೆ ಕೊಡಬೇಕು. ನೇರ ಸ್ಟೇಷನ್‌ಗೆ ಬಂದು ತಿಳಿಸಬೇಕು. ಇಲ್ಲದಿದ್ದರೆ ದೊಡ್ಡ ಅಪರಾಧ ಆಗುತ್ತೆ. ಆಮೇಲೆ ಜೈಲು ಸೇರಬೇಕಾಗುತ್ತೆ' ಎಂದರು. ಸಣ್ಣ ಶಿವನಂಜಯ್ಯ ಬೆಪ್ಪನಂತೆ ಸುಮ್ಮನೆ ಕೂತುಕೊಂಡಿದ್ದ. ಮೊದಲಬಾರಿಗೆ ಸ್ಟೇಷನ್ ಒಳಗೆ ಬಂದಿದ್ದರಿಂದ ನಡುಗುತ್ತಿದ್ದ. ಅಲ್ಲದೆ ಪೆನ್ನೇಶಿ ಮತ್ತು ಪದ್ದೇಶಿ ಎಂಬ ಅವಳಿ ಸಹೋದರರಿಗೆ ಮರ ಕಡಿಯಲು ಹೇಳಿದ್ದನಷ್ಟೆ. ಅವರು ಒಂದು ವಾರದಿಂದ ಆ ಬೃಹತ್ತು ಮರವನ್ನು ಕಡಿದು ಕೊಯ್ದಿದ್ದರು. ಆದರೆ ಕೊನೇ ದಿನ ಮಾತ್ರ ಹೊಲದ ಬಳಿ ಹೋಗದೆ ಮನೆಯಲ್ಲಿ ಉಳಿದಿದ್ದ. ಹಾಗಾಗಿ ಅಲ್ಲಿ ಸಿಕ್ಕಿರುವ ಲೋಹದ ಪ್ರಾಣಿ ಬಗ್ಗೆ ಏನೂ ಗೊತ್ತಿರದಿದ್ದ ಅವನಿಗೆ ಈಗ ಸ್ಟೇಷನ್‌ನಲ್ಲಿ ನಡೆಯುತ್ತಿರುವುದು ಅಸಂಗತವಾಗಿ ಕಾಣುತ್ತಿತ್ತು. 'ನೀರು ಕುಡಿಯುತ್ತೀರೇನ್ರಿ?' ಎಂದ